ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 08 ಎಟಿಎಸ್[1] 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 30/07/2018.

:ಸುತ್ತೋಲೆ:

ವಿಷಯ:- ಬಿ.ಇ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲು ಸಂದರ್ಶನವನ್ನು ನಡೆಸುವ ಕುರಿತು.

-***-

ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳಿ, Boat (Board Of Apprenticeship Training), ಚೆನ್ನೈ ಇವರ ಸಹಯೋಗದೊಂದಿಗೆ **ದಿನಾಂಕ: 04/08/2018** ರಂದು ಸಹ್ಯಾದ್ರಿ ಇಂಜನಿಯರಿಂಗ್ ಕಾಲೇಜು,ಮಂಗಳೂರು ಇಲ್ಲಿ ಅಂಪ್ರೆಟಿಶಿಸಿಪ್ ಮೇಳವನ್ನು(Apprenticeship Fair) ಆಯೋಜಿಸಲಾಗಿದೆ.
ಶಿಶಿಕ್ಷು ತರಬೇತಿ ಅಧಿನಿಯಮ ಅಪ್ರೆಂಟಿಸ್ ಆಕ್ಟ್ 1961ರ (1973 & 1986 ರ ತಿದ್ದುಪಡಿ) ಪ್ರಕಾರ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬಿ.ಇ. ಮತ್ತು ಡಿಪ್ಲೋಮಾ ತಾಂತ್ರಿಕ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿ 3 ವರ್ಷ 3 ತಿಂಗಳ ಅವಧಿಯೊಳಗೆ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಸರ್ಕಾರಿ/ಖಾಸಗಿ ಒಡೆತನದ ಉದ್ದಿಮೆ/ಕೈಗಾರಿಕೆ ಸಂಸ್ಥೆಗಳಲ್ಲಿ ಪಡೆಯಲು ಅವಕಾಶ ಮಾಡಲಾಗಿದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ(MHRD) ಅಡಿಯಲ್ಲಿ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಕಾರ್ಖಾನೆ/ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಸಂಬಂಧ, 30ಕ್ಕೂ ಹೆಚ್ಚು ಸರ್ಕಾರಿ/ಖಾಸಗಿ ಕಾರ್ಖಾನೆ/ಕೈಗಾರಿಕಾ ಕಂಪನಿಗಳು ಪಾಲ್ಗೊಳ್ಳಲಿವೆ.

ಈ ಕಾರ್ಯಕ್ರಮಕ್ಕೆ ಭಾಗವಹಿಸುವ ಬಿ.ಇ. ಮತ್ತು ಡಿಪ್ಲೋಮಾ ಅಭ್ಯರ್ಥಿಗಳು **www.boatsr-apprentice.tn.nic.in** ನಲ್ಲಿ ನೊಂದಣಿ ಮಾಡಿ ಭಾಗವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

**ನಿರ್ದೇಶಕರು**

3/7/18

**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 08 ಎಟಿಎಸ್[1] 2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 30/07/2018.

**ಇವರಿಗೆ,**
ಪ್ರಾಚಾರ್ಯರು,
ಸಹ್ಯಾದ್ರಿ ಇಂಜನಿಯರಿಂಗ್ ಕಾಲೇಜು,
ಮಂಗಳೂರು.

ಮಾನ್ಯರೆ,

ವಿಷಯ:- ಬಿ.ಇ ಮತ್ತು ಡಿಪ್ಲೋಮಾ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಬೇತಿ ನೀಡಲು ಸಂದರ್ಶನವನ್ನು ತಮ್ಮ ಸಂಸ್ಥೆಯಲ್ಲಿ ನಡೆಸುವ ಕುರಿತು.

ಉಲ್ಲೇಖ:- ನಿರ್ದೇಶಕರು, ಶಿಶಿಕ್ಷು ತರಬೇತಿ ಮಂಡಳ(Board Of Apprenticeship Training), ಚೆನ್ನೈ ಇವರ ಪತ್ರಸಂಖ್ಯೆ: BAT/SRP/34/CS-MLR/2018, dated:16/07/2018.

-***-

ಶಿಶಿಕ್ಷು ತರಬೇತಿ ಅಧಿನಿಯಮ ಅಪ್ರೆಂಟಿಸ್ ಆಕ್ಟ್ 1961ರ (1973 & 1986 ರ ತಿದ್ದುಪಡಿ) ಪ್ರಕಾರ ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಬಿ.ಇ. ಮತ್ತು ಡಿಪ್ಲೋಮಾ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿ 3 ವರ್ಷ 3 ತಿಂಗಳ ಅವಧಿಯೊಳಗೆ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಸರ್ಕಾರಿ/ಖಾಸಗಿ ಒಡೆತನದ ಉದ್ದಿಮೆ/ಕೈಗಾರಿಕೆ ಸಂಸ್ಥೆಗಳಲ್ಲಿ ಪಡೆಯಲು ಅವಕಾಶ ಮಾಡಲಾಗಿದೆ.

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ(MHRD) ಅಡಿಯಲ್ಲಿ ಒಂದು ವರ್ಷದ ಶಿಶಿಕ್ಷು ತರಬೇತಿಯನ್ನು ವಿವಿಧ ಕಾರ್ಖಾನೆ/ಕೈಗಾರಿಕೆಗಳಲ್ಲಿ ತರಬೇತಿ ನೀಡುವ ಸಂಬಂಧ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳ(Board Of Apprenticeship Training), ಚೆನ್ನೈ ಇವರ ಸಹಯೋಗದೊಂದಿಗೆ **ದಿನಾಂಕ**: 04/08/2018 ರಂದು ತಮ್ಮ ಸಂಸ್ಥೆಯ ಕ್ಯಾಂಪಸ್‌ನಲ್ಲಿ ಸಂದರ್ಶನ ನಡೆಸಲು ನಿರ್ಧರಿಸಲಾಗಿದೆ.

ಈ ಕಾರ್ಯಕ್ರಮದ ಪ್ರಯೋಜನ ಪಡೆಯಲು ತಮ್ಮ ಹಂತದಲ್ಲಿ ಸ್ಥಳೀಯ ಹಾಗೂ ಸುತ್ತಮುತ್ತಲಿನ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾಹಿತಿಯನ್ನು ನೀಡಿ ಸಾಕಷ್ಟು ಪ್ರಮಾಣದಲ್ಲಿ ಅಭ್ಯರ್ಥಿಗಳು ಈ ಸಂದರ್ಶನದಲ್ಲಿ ಭಾಗವಹಿಸಿ ಶಿಶಿಕ್ಷು ತರಬೇತಿ(Apprenticeship Training) ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಹಾಗೂ ಈ ಬಗ್ಗೆ ಸ್ಥಳೀಯ ವೃತ್ತ ಪತ್ರಿಕೆಗಳಲ್ಲೂ ಸಹ ಪತ್ರಿಕಾ ಮತ್ತು ಟಿವಿ ಮಾಧ್ಯಮಗಳಲ್ಲಿ ಪ್ರಕಟಣೆ ನೀಡಲು ಸೂಚಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಭಾಗವಹಿಸುವ ಬಿ.ಇ. ಮತ್ತು ಡಿಪ್ಲೋಮಾ ಅಭ್ಯರ್ಥಿಗಳು **www.boatsr-apprentice.tn.nic.in** ನಲ್ಲಿ ನೊಂದಣಿ ಮಾಡಿ ಭಾಗವಹಿಸಬೇಕೆಂದು ತಿಳಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಶಿಶಿಕ್ಷು ತರಬೇತಿ ಮಂಡಳ(BOAT), ಚೆನ್ನೈ ಇಲ್ಲಿನ ಸಹ ನಿರ್ದೇಶಕರಾದ ಶ್ರೀ ಎಂ. ಸುರೇಶ್‌ಕುಮಾರ್(ದೂರವಾಣಿ ಸಂಖ್ಯೆ: 9952207099/9444897225) ಇವರನ್ನು ಸಂಪರ್ಕಿಸಲು ತಿಳಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

ಜಂಟಿ ನಿರ್ದೇಶಕರು(ಎಟಿಎಸ್)